

# ವಿಕ್ಕಿ ಕೌಶಲ್ ಖುಷ್

ವಿಕ್ಕಿ ಕೌಶಲ್ ಬಾಲಿವುಡ್‌ನಲ್ಲಿ ಬಿರುಗಾಳಿ ಎಬ್ಬಿಸಿರುವ ಉದಯೋನ್ಮುಖ ನಟ. 'ಉರಿ: ದಿ ಸರ್ಜಿಕಲ್ ಸ್ಟ್ರೈಕ್' ಚಿತ್ರದ ಮೂಲಕ ಆತನ ಖ್ಯಾತಿ ದೇಶದಾದ್ಯಂತ ಹಬ್ಬಿದೆ. 'ರಾಝಿ' ಮತ್ತು 'ಸಂಜು' ಚಿತ್ರದಲ್ಲಿ ಈತನ ಅಭಿನಯ ನೋಡಿದವರು ಮುಂದೊಂದು ದಿನ ಈತ ಸೂಪರ್‌ಸ್ಟಾರ್ ಆಗುವವನೇ ಎಂದು ಭವಿಷ್ಯ ನುಡಿದಿದ್ದರು. 'ಉರಿ..' ಬಳಿಕ ಈತ ಬಾಲಿವುಡ್‌ನ ಹೊಸ ಗೋಲ್ಡನ್ ಬಾಯ್ ಆಗಿ ಮಿಂಚುತ್ತಿದ್ದಾನೆ.

ಬಾಲಿವುಡ್‌ನಲ್ಲಿ ಥ್ರಿಲ್ಲರ್ ಸಿನಿಮಾಗಳಿಗೆ ಹೆಸರುವಾಸಿಯಾಗಿರುವ ನಿರ್ದೇಶಕ ಶೂಜಿತ್ ಸರ್ಕಾರ್ ಇದೀಗ ತನ್ನ ಹೊಸ ಚಿತ್ರದಲ್ಲಿ ವಿಕ್ಕಿ ಕೌಶಲ್‌ಗೆ ಹೀರೊ ಪಾತ್ರ ನೀಡಿದ್ದಾರೆ. ಸ್ವಾತಂತ್ರ್ಯಯೋಧ ಸರ್ದಾರ್ ಉಧಾಂ ಸಿಂಗ್ ಜೀವನ ಕಥೆಯೇ ಈ ಚಿತ್ರಕ್ಕೆ ಆಧಾರ. ಬ್ರಿಟಿಷ್ ಭಾರತದಲ್ಲಿ 1940ರ ಹೊತ್ತಿಗೆ ಸ್ವಾತಂತ್ರ್ಯ ಚಳವಳಿ ಭುಗಿಲೆದ್ದ ದಿನಗಳವು. 1919ರ ಹತ್ಯಾಕಾಂಡಕ್ಕೆ ಪ್ರತೀಕಾರವಾಗಿ ಉಧಾಂ ಸಿಂಗ್, ಪಂಜಾಬಿನ ಆಗಿನ ಲೆಫ್ಟಿನೆಂಟ್ ಗವರ್ನರ್ ಮೈಕೆಲ್ ಒಡ್ವೈರ್ ಎಂಬಾತನನ್ನು ಗುಂಡಿಕ್ಕಿ ಕೊಲ್ಲುತ್ತಾನೆ. ಶೂಜಿತ್ ಸರ್ಕಾರ್‌ರ ಚಿತ್ರಗಳನ್ನು ಯಾವತ್ತೂ ಹೊಗಳುತ್ತಿರುವ ವಿಕ್ಕಿ ಕೌಶಲ್‌ಗೆ ಈಗ ಆತನ ಚಿತ್ರದಲ್ಲೇ ನಟಿಸಲು ಅವಕಾಶ ಸಿಕ್ಕಿರುವುದು ಥ್ರಿಲ್ ಉಂಟುಮಾಡಿದೆಯಂತೆ. ಮುಂದಿನ ತಿಂಗಳಿಂದ ಚಿತ್ರದ ಶೂಟಿಂಗ್ ಆರಂಭವಾಗಲಿದ್ದು ಜನವರಿಯಲ್ಲಿ ಬಿಡುಗಡೆ ಕಾಣಬಹುದು.

# ಜಾಹ್ನವಿಯ ಫಿಟ್‌ನೆಸ್

ಶ್ರೀದೇವಿಯ ಮಗಳು ಜಾಹ್ನವಿ ಕಪೂರ್ ತನ್ನ ಹೊಸ ಸಿನಿಮಾಗಳಿಗಿಂತ, ಫಿಟ್‌ನೆಸ್ ವಿಷಯದಲ್ಲೇ ಹೆಚ್ಚು ಸುದ್ದಿಯಲ್ಲಿದ್ದಾಳೆ. 'ಧಡಕ್' ಚಿತ್ರದ ಮೂಲಕ ಬಾಲಿವುಡ್ ಪ್ರವೇಶಿಸಿ ಎಲ್ಲರ ಮನಗೆದ್ದ ಈ ದೊಡ್ಡ ಕಣ್ಣುಗಳ ಸುಂದರಿ, ಪ್ರತಿದಿನ ಜಿಮ್‌ನಲ್ಲಿ ನಡೆಸುವ ವರ್ಕ್‌ಔಟ್ ಸೆಷನ್‌ಗಳ ತರಹೇವಾರಿ ಫೋಟೊಗಳನ್ನು ಇನ್‌ಸ್ಟಾಗ್ರಾಮ್‌ಗೆ ಏರಿಸಿ ಪಡ್ಡೆ ಹುಡುಗರ ಏದುಸಿರು ಹೆಚ್ಚಿಸುತ್ತಿದ್ದಾಳೆ. ನೀಳಕಾಲುಗಳನ್ನು ಎತ್ತಿ ತೋರುವ ಅರೆಚಡ್ಡಿ, ಎದೆಗಂಟಿ ಹಿಡಿಯುವ ಟಾಪ್‌ಗಳು, ಅದರ ಕಣ್ಸೆಳೆಯುವ ಬಣ್ಣಗಳು, ಫ್ಯಾಷನಬಲ್ ಹೆಗಲಚೀಲ– ಎಲ್ಲವೂ ಜಾಹ್ನವಿಯದ್ದೇ ಟ್ರೇಡ್‌ಮಾರ್ಕ್ ಎನ್ನುವಂತಿರುತ್ತದೆ. ಹಾಗೆಂದೇ ಇನ್‌ಸ್ಟಾಗ್ರಾಮ್‌ನಲ್ಲಿ ಆಕೆಯ ಹಿಂಬಾಲಕ/ಕಿಯರ ಸಂಖ್ಯೆ ಒಂದೇ ಸಮನೆ ಏರುತ್ತಿದೆ.

'ಧಡಕ್'ನಲ್ಲಿ ತನ್ನ ಸೌಂದರ್ಯ ಮಾತ್ರವಲ್ಲ, ಅಭಿನಯ ಪ್ರತಿಭೆಯಿಂದಲೂ ಬಾಲಿವುಡ್‌ನ ಗಮನ ಸೆಳೆದವಳೀಕೆ. ಶ್ರೀದೇವಿಯ ಮಗಳು ಎಂಬ ಟ್ಯಾಗ್‌ಲೈನ್ ಇಲ್ಲದೆಯೂ ತಾನು ಬಾಲಿವುಡ್‌ನಲ್ಲಿ ಗೆಲ್ಲಬಲ್ಲೆ ಎನ್ನುವುದನ್ನು ಆಕೆಯ ಮೊದಲ ಸಿನಿಮಾ ಸಾಬೀತುಪಡಿಸಿದೆ. ಮೊದಲ ಚಿತ್ರದಲ್ಲಿ ಜಾಹ್ನವಿಯನ್ನು ಮನಸೆಳೆಯುವಂತೆ ಪ್ರೊಜೆಕ್ಟ್ ಮಾಡಿದ ನಿರ್ಮಾಪಕ ಕರಣ್ ಜೋಹರ್, ಇದೀಗ 'ತಖ್ತ್' ಚಿತ್ರದಲ್ಲೂ ಜಾಹ್ನವಿಗೆ ಪ್ರಮುಖ ಪಾತ್ರವೊಂದನ್ನು ನೀಡಿದ್ದಾನೆ. ಮೊಘಲ್ ಸಾಮ್ರಾಜ್ಯದ ಕೊನೆ ಚಕ್ರವರ್ತಿ ಷಾಹಜಹಾನ್ ಮತ್ತು ಮಕ್ಕಳ ನಡುವಣ ಅಂತಃಕಲಹದ ವಸ್ತುವುಳ್ಳ ಈ ಚಿತ್ರದಲ್ಲಿ ಅನಿಲ್ ಕಪೂರ್, ರಣ್‌ಬೀರ್ ಸಿಂಗ್, ಕರೀನಾ ಕಪೂರ್, ಅಲಿಯಾ ಭಟ್, ವಿಕ್ಕಿ ಕೌಶಲ್ ಜೊತೆಗೆ ಜಾಹ್ನವಿ ಕೂಡಾ ಇದ್ದಾಳೆ. ರಣ್‌ಬೀರ್ ಸಿಂಗ್, ಷಾಹಜಹಾನ್‌ನ ಮಗ ದಾರಾ ಶಿಕೋನ ಪಾತ್ರ ನಿರ್ವಹಿಸುತ್ತಿದ್ದು ಆತನ ಪತ್ನಿ ನಾದಿರಾ ಬಾನುವಿನ ಪಾತ್ರ ಅಲಿಯಾ ಭಟ್‌ಳದ್ದು. ವಿಕಿ ಕೌಶಲ್ ಔರಂಗಜೇಬನ ಪಾತ್ರ ನಿರ್ವಹಿಸುತ್ತಿದ್ದು, ಜಾಹ್ನವಿ ಅರಮನೆಯ ವಿದ್ಯಮಾನಗಳಲ್ಲಿ ಪ್ರಮುಖ ಕೊಂಡಿಯಾಗಿದ್ದ ದಾಸಿಯೊಬ್ಬಳ ಪಾತ್ರದಲ್ಲಿದ್ದಾಳೆ.

ರಾಜ್‌ಕುಮಾರ್ ರಾವ್ ಜೊತೆಗೆ 'ರೂಹ್ ಅಫ್ಜಾ' ಈಕೆಯ ಇನ್ನೊಂದು ಹೊಸ ಚಿತ್ರ. 'ಕಾರ್ಗಿಲ್ ಗರ್ಲ್' ಈಗಾಗಲೇ ಶೂಟಿಂಗ್ ಆರಂಭಿಸಿದೆ. ಅದರಲ್ಲಿ ಯುದ್ಧಭೂಮಿಯ ಮುಂಚೂಣಿಯಲ್ಲಿ ಕೆಲಸ ಮಾಡಿದ ಸಾಹಸಿ ಹೆಣ್ಣುಮಗಳು 'ಗುಂಜನ್ ಸಕ್ಸೇನಾ'ಳ ಪಾತ್ರ. ಇನ್ನೊಂದೆಡೆ 'ರಣ್‌ಭೂಮಿ' ಎನ್ನುವ ಮಲ್ಟಿಸ್ಟಾರ್ ಸಿನಿಮಾವೊಂದನ್ನೂ ಈಕೆ ಒಪ್ಪಿಕೊಂಡಿದ್ದಾಳೆ. ಈ ಮಧ್ಯೆ ಸಂಜಯ್ ಲೀಲಾ ಬನ್ಸಾಲಿ ತಮ್ಮ ಹೊಸ ಚಿತ್ರಕ್ಕೆ ಈಕೆಯನ್ನು ಕರೆಸಿ ಮಾತನಾಡಿದ್ದು ಸುದ್ದಿಯಾಗಿದೆ. ಈ ಹೊಸ ಚಿತ್ರದಲ್ಲಿ ಕಾರ್ತಿಕ್ ಆರ್ಯನ್ ಹೀರೊ ಆಗಿರುತ್ತಾನೆ ಎನ್ನುವ ಸುದ್ದಿಯೂ ಹಬ್ಬಿದೆ.



■ ಬಿಂದು